ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ

ಸಿ.ಸಿ ನಂ : 1/2025

ಚಾ.ಸಾಃ 7, ಪ್ರಾ.ಸಾಃ 4

ಸಾಕ್ಷಿದಾರನ ಹೆಸರು	ಅಮಾನುಲ್ಲಾ ಖಾನ
ತಂದೆಯ ಹೆಸರು	ಅಬ್ದುಲ್ ಗಫುರ್ ಖಾನ್
ವಯಸ್ಸು	58 ವರ್ಷಗಳು
ಉದ್ಯೋಗ	ವ್ಯವಸಾಯ
ವಾಸ್ತವ್ಯ	ಸರಳಗಿ, ಹೊನ್ನಾವರ ತಾಲೂಕು

ಸಾಕ್ಷಿಯನ್ನು ದಿನಾಂಕಃ 18-11-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಎಪಿಪಿಯವರಿಂದ,

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿದ್ದೇನೆ.

ದಿನಾಂಕಃ 28-06-2024 ರಂದು ನಾನು ಮತ್ತು ಚಾ.ಸಾ. 6 ಸಿದ್ದಾಪುರಕ್ಕೆ ಹೋಗಲು ಹೊನ್ನಾವರ ಸಾಗರ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಾ.ಸಾ. 6 ರವರ ಬೈಕಿನಲ್ಲಿ ಹೋಗುತ್ತಿದ್ದೆವು. ಸಂಜೆ 4.30 ರ ಸಮಯಕ್ಕೆ ಗೇರುಸೊಪ್ಪ ಡ್ಯಾಮ ಹತ್ತಿರ ಹೋಗುತ್ತಿದ್ದಾಗ ನಮ್ಮ ಮುಂಭಾಗದಲ್ಲಿ ಒಂದು ಓಮಿನಿ ಕಾರ ಹೋಗುತ್ತಿತ್ತು. ಆ ಕಾಲಕ್ಕೆ ಎದುರಿನಿಂದ ಒಂದು ಮಿನಿ ಬಸ್ಸ ಬರುತ್ತಿದ್ದು, ಬಸ್ಸ ಚಾಲಕ ಬಸ್ಸನ್ನು ಎಡಭಾಗಕ್ಕೆ ತಿರುಗಿಸಿ ನಮ್ಮ ಮುಂದೆ ಹೋಗುತ್ತಿದ್ದ ಓಮಿನಿ ಕಾರಗೆ ಡಿಕ್ಕಿಪಡಿಸಿರುತ್ತದೆ. ನಾವು ಬೈಕ್ ನಿಲ್ಲಿಸಿ ನೋಡಲಾಗಿ ಓಮಿನಿ ಚಾಲಕನಿಗೆ ಮುಖದ ಮೇಲೆ ರಕ್ತ ಬರುತ್ತಿತ್ತು. ಆತನ ಜೊತೆ ಆತನ ಹೆಂಡತಿ ಸಹ ಇದ್ದು, ಅವರಿಗೂ ಗಾಯಗಳಾಗಿದ್ದವು. ತಕ್ಷಣ ಅವರಿಗೆ ನೀರು ಕುಡಿಸಲು ಪ್ರಯತ್ನಿಸಿದೆವು. ನಂತರ ಪೊಲೀಸರಿಗೆ ಫೋನ್ ಮಾಡಲಾಗಿ ರಾಷ್ಟ್ರೀಯ ಹೆದ್ದಾರಿಯ ಗಸ್ತುವಾಹನ ಬಂದಿದ್ದು, ನಂತರ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾವು ಸಿದ್ದಾಪುರಕ್ಕೆ ಹೋಗಿರುತ್ತೇವೆ. ತದ ನಂತರ ಓವಿನಿ ಚಾಲಕ ಮೃತಪಟ್ಟ ವಿಚಾರ ಗೊತ್ತಾಯಿತು.

ಮರುದಿನ ಸಂಜೆ 4.00 ರಿಂದ 5.00 ಗಂಟೆ ಸಮಯಕ್ಕೆ ಪೊಲೀಸರು ನನ್ನನ್ನು ಅಪಘಾತ ಸ್ಥಳಕ್ಕೆ ಕರೆಸಿದ್ದು, ನಾನು ಅಪಘಾತ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದು, ಸದರಿ ಸ್ಥಳದಲ್ಲಿ ಪೊಲೀಸರು ಪಂಚನಾಮೆ ಹಾಗೂ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ. ಪಂಚನಾಮೆಗೆ ಹಾಗೂ ಕಚ್ಚಾ ನಕಾಶೆಗೆ ನಾನು ಸಾಕ್ಷಿ ಸಹಿ ಹಾಕಿದ್ದು, ಈಗ ಅವುಗಳನ್ನು ನೋಡುತ್ತಿದ್ದು, ಪಂಚನಾಮೆಯನ್ನು ನಿ.ಪಿ. 2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿ.ಪಿ. 2(ಸಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು, ಕಚ್ಚಾ ನಕಾಶೆಯನ್ನು ನಿ.ಪಿ. 3 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿ.ಪಿ. 3(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ಅಪಘಾತಕ್ಕೆ ಒಳಗಾಗಿದ್ದ ಎರಡು ವಾಹನಗಳು ಸ್ಥಳದಲ್ಲೇ ಇದ್ದವು. ಪೊಲೀಸರು ಸ್ಥಳ ಪಂಚನಾಮೆಯ ಕಾಲಕ್ಕೆ ಸ್ಥಳದ ಹಾಗೂ ವಾಹನಗಳ ಫೋಟೋ ತೆಗೆಸಿರುತ್ತಾರೆ. ಈಗ ಅವುಗಳನ್ನು ನೋಡುತ್ತಿದ್ದು, ಅವುಗಳನ್ನು ನಿ.ಪಿ. 4 ರಿಂದ 9 ಎಂದು ಗುರುತಿಸಲಾಗಿದೆ.

ಅಪಘಾತಪಡಿಸಿದ ಬಸ್ಸ ನಂ. ನೋಡಲಾಗಿ ಕೆಎ-51-ಎಡಿ-7023 ಆಗಿದ್ದು, ಸ್ಥಳದಲ್ಲಿ ಬಸ್ಸ ಚಾಲಕನನ್ನು ನೋಡಿದ್ದು, ಆತನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಮಿನಿ ಬಸ್ಸ ಚಾಲಕ ಬಸ್ಸನ್ನು ವೇಗವಾಗಿ ಚಾಲಯಿಸಿಕೊಂಡು ಎಡ ಭಾಗದಲ್ಲಿ ಬರುತ್ತಿದ್ದವರು ರಸ್ತೆಯ ಬಲಭಾಗಕ್ಕೆ ತಿರುಗಿಸಿ ಎದುರಿಗೆ ಹೋಗುತ್ತಿದ್ದ ಓಮಿನಿ ಕಾರಿಗೆ ಡಿಕ್ಕಿಪಡಿಸಿದ್ದರಿಂದ ಅಪಘಾತ ಆಗಿದ್ದು, ಬಸ್ಸ ಚಾಲಕನ ತಪ್ಪಿಂದಲೇ ಅಪಘಾತ ಆಗಿರುತ್ತದೆ. ಸದ್ರಿ ವಿಚಾರವನ್ನು ಪೊಲೀಸರಿಗೆ ಹೇಳಿದ್ದೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್ ಎಲ್ ನಾಯ್ಕರವರಿಂದಃ

ನಾನು ಈ ಹಿಂದೆ ನಮ್ಮ ಊರಿನ ಹತ್ತಿರ ಒಂದು ಟೆಂಪೋ ಅಪಘಾತದಲ್ಲಿ ನಮ್ಮ ಊರಿನವರು ಮೃತಪಟ್ಟಿದ್ದ. ಸದರಿ ಪ್ರಕರಣಲ್ಲಿ ಸಾಕ್ಷಿ ನುಡಿದಿದ್ದು, ಅದನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣದಲ್ಲಿ ಸಾಕ್ಷಿ ನುಡಿದಿಲ್ಲ. ಮೃತ ವ್ಯಕ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ. ಅಪಘಾತ ಆದ ತಕ್ಷಣ ನಾನು ಯಾವುದೇ ಫೊಟೋ ತೆಗೆದಿಲ್ಲ. ಪಂಚನಾಮೆಯ ಕಾಲಕ್ಕೆ ಅಪಘಾತಕ್ಕೆ ಒಳಗಾಗಿದ್ದ ಎರಡು ವಾಹನಗಳನ್ನು ಅಪಘಾತ ಸ್ಥಳದಿಂದ ರಸ್ತೆಯ ಪಕ್ಕಕ್ಕೆ ನಿಲ್ಲಿಸಲಾಗಿತ್ತು. ಪಂಚನಾಮೆಯ ಕಾಲಕ್ಕೆ ವಾಹನದ ಒಡೆದ ಬಿಡಿ ಭಾಗಗಳು ಸ್ಥಳದಲ್ಲಿ ಇದ್ದಿರಲಿಲ್ಲ ಆದರೆ ಚಕ್ರದ ಗುರುತು ಇತ್ತು. ಸದರಿ ರಸ್ತೆಯಲ್ಲಿ 24 ಗಂಟೆಯೂ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಪಂಚನಾಮೆಯ ಕಾಲಕ್ಕೆ ಬರಬೇಕೆಂದು ಪೊಲೀಸರು ನನ್ನನ್ನು ಕರೆದಿರುತ್ತಾರೆ. ಅಪಘಾತ ಆದಾಗಲೇ ಸ್ಥಳಕ್ಕೆ ಬಂದ ರಾಷ್ಟ್ರೀಯ ಹೆದ್ದಾರಿ ಪೊಲೀಸರಿಗೆ ನಾನು ನನ್ನ ವಿಳಾಸ ಕೊಟ್ಟಿದ್ದೆ. ಪಂಚನಾಮೆಯ ಕಾಲಕ್ಕೆ ಹಾಜರಾಗುವಂತೆ ಪೊಲೀಸರು ನೋಟೀಸ್ ನೀಡಲಿಲ್ಲ. ಪಂಚನಾಮೆಯ ಕಾಲಕ್ಕೆ 10-15 ಜನ ಇದ್ದರು. ಸ್ಥಳದಲ್ಲಿದ್ದ ಎಲ್ಲರ ಸಹಿಯನ್ನು ಪಂಚನಾಮೆಗೆ ಹಾಕುವಂತೆ ಪೊಲೀಸರು ಕೇಳಲಿಲ್ಲ. ಪೊಲೀಸರು ಪಂಚನಾಮೆ ಮಾಡಬೇಕೆಂದು ಕರೆದಿದ್ದರಿಂದ ಮರುದಿನ ಪಂಚನಾಮೆಗೆ ಹೋಗಿರುತ್ತೇನೆ. ನಾನು ಪಂಚನಾಮೆಗೆ ಮತ್ತು ಕಚ್ಚಾ ನಕಾಶೆಗೆ ಠಾಣೆಯಲ್ಲಿ ಸಹಿ ಹಾಕಿದ್ದು, ಸ್ಥಳದಲ್ಲಿ ಯಾವುದೇ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ.

ಅಪಘಾತ ಸ್ಥಳದಲ್ಲಿ ಯಾವುದೇ ರೀತಿಯ ತಿರುವು ಇಲ್ಲ, ರಸ್ತೆ ನೇರವಾಗಿದೆ. ಸದರಿ ರಸ್ತೆಯಲ್ಲಿ ನಾನು ಬಹಳಷ್ಟು ಸಾರಿ ಓಡಾಡಿದ್ದು, ಸದರಿ ರಸ್ತೆಯ ಬಗ್ಗೆ ನನಗೆ ಮಾಹಿತಿ ಇದೆ. ನಾನು ಹೋಗುತ್ತಿದ್ದ ಬೈಕ ಸಂಖ್ಯೆ ನೆನಪಿಲ್ಲ. ನಮಗಿಂತ 40-50 ಅಡಿ ದೂರದಲ್ಲಿ ಓಮಿನಿ ಕಾರ್ ಹೊಗುತ್ತಿತ್ತು. ಬಸ್ಸು ಓಮಿನಿ ಕಾರಿಗೆ ಡಿಕ್ಕಿಪಡಿಸಿದ್ದರಿಂದ ಕಾರು ಹಿಂದಕ್ಕೆ ಬರಲಿಲ್ಲ, ಪಕ್ಕಕ್ಕೆ ಹೋಗಿರುತ್ತದೆ. ಅಪಘಾತ ಆದ ತಕ್ಷಣ ನಾವೇ ಮೊದಲು ಗಾಯಳುಗಳನ್ನು ಉಪಚರಿಸಿರುತ್ತೇವೆ. ಅಷ್ಟರಲ್ಲಿ ಸ್ಥಳದಲ್ಲಿದ್ದ ಅಂಗಡಿಯವರು ಬಂದು ಸೇರಿರುತ್ತಾರೆ. ನಾನು ಅಪಘಾತಕ್ಕಿಂತ ಮೊದಲು ಬಸ್ಸನ್ನು ನೋಡಿದಾಗ ಅದು ಸುಮಾರು 75-80 ಅಡಿ ದೂರದಿಂದ ಬರುತ್ತಿತ್ತು. ಬಸ್ಸನ ಮುಂಭಾಗದಲ್ಲಾಗಲಿ ಅಥವಾ ಓಮಿನಿ ಮುಂಭಾಗದಲ್ಲಾಗಲಿ ಯಾವುದೇ ವಾಹನ ಬರುತ್ತಿರಲಿಲ್ಲ. ನಾನು ಬಸ್ಸನ್ನು ನೋಡಿದಾಗಲೇ ಬಸ್ಸ ಚಾಲಕನನ್ನು ನೋಡಲಿಲ್ಲ, ಅಪಘಾತ ಆದ ನಂತರ ಬಸ್ಸ ಚಾಲಕನನ್ನು ನೋಡಿರುತ್ತೇನೆ. ಬಸ್ಸನ್ನು ನಾನು ನೋಡಿದಾಗ ಬೈಕು

ನಿಧಾನವಾಗಿ ಹೋಗುತ್ತಿತ್ತು. ಅಪಘಾತವು ನಾವು ಹೋಗುತ್ತಿದ್ದ ರಸ್ತೆಯ ಎಡಬದಿಯಲ್ಲಿ ಆಗಿರುತ್ತದೆ. ಅಪಘಾತ ಆಗಿದ್ದ ಸ್ಥಳವನ್ನೇ, ರಸ್ತೆಯ ಎಡಬದಿಯನ್ನೇ ನಾನು ಪೊಲೀಸರಿಗೆ ತೋರಿಸಿರುತ್ತೇನೆ. ನಾನು ನಕಾಶೆಯನ್ನು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಕಾಶೆಯನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ತೋರಿಸುವ ಸ್ಥಳವನ್ನೇ ಪೊಲೀಸರು ನಕಾಶೆಯಲ್ಲಿ ತೋರಿಸಿರುತ್ತಾರೆ. ಅಪಘಾತ ಆದ ದಿನ ನನ್ನ ಬಳಿ ಮೊಬೈಲ್ ಇತ್ತು. ಅಪಘಾತ ಆದ ತಕ್ಷಣ ನನ್ನ ಮೊಬೈಲ್ ನಲ್ಲಿ ಅಪಘಾತದ ಫೊಟೋ ತೆಗೆದಿಲ್ಲ. ನಾನು ಮತ್ತು ಚಾ.ಸಾ. 6 ಆ ದಿನ ಬೈಕಿನಲ್ಲಿ ಅಪಘಾತ ಆಗಿದ್ದ ರಸ್ತೆಯಲ್ಲಿ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಅಪಘಾತವನ್ನು ನೋಡಿಲ್ಲದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ